( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 20/08/2022**
**ಅಸಲು ದಾವೆ.ನಂ.38/2016**
**ಪಿ.ಡಬ್ಲ್ಯೂ1**

( ಪಾಟೀ ಸವಾಲುಃ ಶ್ರೀ. ಎ ಆರ್ ಜೆ ವಕೀಲರಿಂದ ಪ್ರತಿವಾದಿಯ ಪರವಾಗಿ )

ನನ್ನ ತಂದೆಯ ಹೆಸರು ಅರ್.ಟಿ.ಗೋವಿಂದೇಗೌಡ.ನನ್ನ ತಂದೆಗೆ ಒಟ್ಟು 6 ಜನ ಅಣ್ಣತಮ್ಮಂದಿರು. ಅವರುಗಳೆಂದರೆ ಗೋವಿಂದೇಗೌಡ, ಆರ್.ಟಿ..ಕೃಷ್ಣೇಗೌಡ, ಆರ್.ಟಿ.ಗೋವಿಂದೇಗೌಡ, ಆರ್.ಟಿ.ರಾಮೇಗೌಡ, ಆರ್.ಟಿ.ಸೂರ್ಯನಾರಾಯಣ, ಆರ್.ಟಿ. ತಿಮ್ಮೇಗೌಡ ಮತ್ತು ಆರ್.ಟಿ. ಶಿವಣ್ಣ. ದಿನಾಂಕ 09.01.1970 ರಲ್ಲಿ ನಮ್ಮ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತವಾದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಾವಾ ಅನುಸೂಚಿ ಸಮ್ತುಗಳು ನನಗೆ ಸೇರಬೇಕಾದ ಆಸ್ತಿಗಳು ಎಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. 1980 ನೇ ಇಸವಿಯಿಂದ ನನಗೂ ಮತ್ತು ಪ್ರತಿವಾದಿಗಳಿಗೂ ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಗಲಾಟೆಯಾಗುತ್ತಿದೆ ಎಂದರೆ ಸರಿ. 1980 ಇಸವಿಯಿಂದಲೂ ಸಹ ದಾವಾ ಅನುಸೂಚಿ ಸ್ವತ್ತುಗಳು ತನಗೆ ಸೇರಬೇಕೆಂದು ಪ್ರತಿವಾದಿ ಗಲಾಟೆ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ದಾವಾ ಅನುಸೂಚಿ ಸ್ವತ್ತಿಗೆ ಸಂಬಂದಪಟ್ಟಂತೆ ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು 1980 ನೇ ಇಸವಿಯಿಂದಲೂ ಕೂಡ ನಾನು ಸ್ವತ್ತನ್ನು ನನಗೆ ಬಿಡಿಸಿಕೊಡಿ ಎಂದು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ದಾವಾ ಅನುಸೂಚಿ ಸ್ವತ್ತಿನ ಸ್ವಾದೀನ ನನ್ನ ಬಳಿಯೇ ಇದೆ ಎಂದು ನುಡಿಯುತ್ತಾರೆ. ತಿರುಮಲೇಗೌಡ ಎಂದರೆ ನನ್ನ ತಾತ. ರುದ್ರಪಟ್ಟಣ ಗ್ರಾಮದ ಸರ್ವೆ ನಂ.5/3 ಕ್ಕೆ ಸಂಬಂದಪಟ್ಟಂತ ಪಹಣಿ ಪತ್ರಿಕೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ನಿಪಿ 5 ನ್ನು ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯ ಕಲಂ ನಂ.9 ರಲ್ಲಿರುವ ಕೃಷ್ಣೇಗೌಡ ಬಿನ್ ತಿರುಮಲೇಗೌಡ ಎಂದರೆ ಯಾರು ಎಂದು ಕೇಳಲಾಗಿ ಸಾಕ್ಷಿಯು ಅವರು ಪ್ರತಿವಾದಿಯ ತಂದೆ ಎಂದು ನುಡಿಯುತ್ತಾರೆ. ಸದರಿ ನಿಪಿ 5 ರ ಪಹಣಿ ಪತ್ರಿಕೆಯಲ್ಲಿ 3 ಗುಂಟೆ ಜಮೀನು ನಮೂದಾಗಿದೆ ಎಂದರೆ ಸರಿ. ಸದರಿ 3 ಗುಂಟೆ ಜಮೀನು 1970 ನೇ ಇಸವಿಯಲ್ಲಿ ಹಿಸ್ಸೆಯಾದ ಸಂದರ್ಭದಲ್ಲಿ ಪ್ರತಿವಾದಿಯ ತಂದೆಯಾದ ಕೃಷ್ಣೇಗೌಡರ ಹಿಸ್ಸೆಗೆ ಹೋಗಿತ್ತು ಎಂದರೆ ಸರಿ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**
**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**